ಉಮಾ ಮತ್ತಿಘಟ್ಟ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರು. ಶಿರಸಿಯ ಹೊನ್ನೆಭಾಗ ಎಂಬ ಹಳ್ಳಿಯಲ್ಲಿ ನೆಲೆಸಿದ್ದಾರೆ. 'ಪಾತಿದೋಣಿ' ಕಥಾ ಸಂಕಲನ, 'ಮಾಧವೀ ಸ್ವಯಂವರ' ನಾಟಕ ಪ್ರಕಟಿತ ಕೃತಿಗಳು. ಕನ್ನಡದ ಅನೇಕ ಮಹತ್ವದ ಕೃತಿಗಳನ್ನು ಅವರು ಹಿಂದಿಗೆ ಅನುವಾದಿಸಿದ್ದಾರೆ.

ಅಪರೂಪ. ಬಂದ್ರೆ ಖುಶಿಂದ ನಾಕ್ ಮಾತುಕತೆ ಊಹೂ ಕೇಳಡ. ಶಿಟ್ ಬಂದ್ರೆ ಜಮದಗ್ನಿ.ಅವತಾರ. ಶಿಕ್ ಶಿಕ್ಕಿದ್ರಲ್ಲಿ ಹೊಡ್ಯುದೇಯ. ಯಂತ ದೆವ್ವ ಆವೇಶ ಆಗ್ತೊ ಯಂತದನ. ಒಂದೇ ಕ್ಷಣ. ಕಡೇಗೆ ಅವ್ವೇಯ ಪಶ್ಚಾತ್ತಾಪ ಪಡ್ತೊ , ಯಂತಕ್ಕೆ ಶಿಟ್ಟ ಬಪ್ಪಾಂಗೆ ಮಾಡ್ತೆ ಹೇಳ್ತೊ. ಇಂತವ್ಕೆ ಯಂತ ಹೇಳೂದು. ಆನು ಹೇಳೀರೆ ಯಾರೂ ನಂಬತ್ವಿಲ್ಲೆ. ಯಲ್ಲಾ ಯನ್ನ ಹಣೆ ಬರ' ಎನ್ನುವಷ್ಟರಲ್ಲಿ 'ಗಂಗೇ ಅನ್ನ ಕಡಿಮೆ ಆಗ್ತನ ಪರಮಣ್ಣಂಗೆ ಹೇಳಿ ಬಿಡು, ಅವ ಯಲ್ಲಿ ಬೀಡಿ ಬುಸಗುಡಸ್ತಾ ಇದ್ದನನ' ಎನ್ನುತ್ತಾ ಪದ್ಮಾವತಿ ಅಡುಗೆ ಚಪ್ಪರಕ್ಕೆ ಬಂದಳು.

ಗಂಗೆ ದೇವರೂನ ಸಂಸಾರದ ಗಾಡಿಯ ಜತಗೆ ಕಟ್ಟುವಾಗ ಪರಮಾತ್ಮನ ಮನಸ್ಸಿನಲ್ಲಿ ಅದೇನಿತ್ತೋ? ದೇವರು ಭಟ್ಟ ಆಟ ಕುಣಿಯಲು ಹೋದರೆ, ಇತ್ತ ಇದ್ದೊಬ್ಬ ಮಗ ಮೊದಲು ಶಾಲೆ ಎಂದು ಅಲ್ಲಿ ಇಲ್ಲಿ ಇದ್ದವನು ಈಗ ಬೆಂಗಳೂರ ದಾರಿ ಹಿಡಿದಿದ್ದ. ಅಲ್ಲಿ ಅವನಿಗೂ ಒಂದು ಕೆಲಸ. ಹಾಗಾಗಿ ಗಂಗೆ ಸಣ್ಣ-ಪುಟ್ಟ ಅಡುಗೆ ಕೆಲಸ ಶುರು ಮಾಡಿಕೊಂಡಿದ್ದಳು. ಈಗ ಊರಲ್ಲೇ ಆದರೆ ಸಣ್ಣ ಪುಟ್ಟ ಮದುವೆ ಸಾಗಿಸಲೂ ಸೈಯೆ. ಅವಳೆಂದೂ ಇಂತಿಷ್ಟೇ ಕೊಡಬೇಕೆಂದು ಕೇಳಿದವಳಲ್ಲ. ಹೋದಲ್ಲಿ ಕಿರಿಕಿರಿಯೆಂತೂ ಇಲ್ಲವೇ ಇಲ್ಲ. ತನ್ನ ಮನೆಯೆಂಬತೇ ಮಾಡುತ್ತಾಳೆ. ಹಾಗಾಗಿ ಅಡುಗೆ ದೊಡ್ಡದಿರಲೀ ಸಣ್ಣದಿರಲಿ ಕೈ ಕೆಲಸಕ್ಕಾದರೂ ಅವಳಿರಲಿ ಎನ್ನುವವರೇ ಹೆಚ್ಚು. ಕೆಲವರು ಕೆಲಸಕ್ಕೆ ತಕ್ಕಂತೇ ದುಡ್ಡು ಕೊಟ್ಟು ಮೇಲಿಂದ ಸೀರೆ ಬಾಗಿನ ಕೊಡುವವರೂ ಇದ್ದಾರೆ. ಇನ್ನು ಕೆಲವರು 'ಗಂಗಕ್ಕಾ ಹತ್ತ ಕೊಡು ಕೈಯಲ್ಲಿ ಐದ ಇಟ್ಟಿದ್ದೊ, ನೀನು ಮನೆಯಂತೆ ಬಂದು ಅಡಿಗೆ ಆಸೆ ಮಾಡಿ ನಾಕ್ ಜನಕ್ಕೆ ಯಮ್ಮನೆ ಬಾಗ್ಲಲ್ಲಿ ಊಟ ಹಾಕು ಪುಣ್ಯ ಕಟ್ಟಕಂಡೆ' ಎಂದು ಕೈ ಬಿಚ್ಚದವರೂ ಇದ್ದಾರೆ. ಅದಕ್ಕೆಲ್ಲಾ ಅವಳು ಬೇಜಾರು ಮಾಡಿಕೊಂಡವಳೇ ಅಲ್ಲ. 'ನರಸಿಂಹಣ್ಣ, ಐದೂ ಬೆಳ್ಳೂ ಒಂದೇ ನಮ್ನಿ ಇರ್ತೊ, ವಂದ ಉದ್ದ ವಂದ ಗಿಡ್ಡ ಇಪ್ಪೂದೇಯ. ಯಂತ ಮಾಡೂಲೂ ಬತ್ತಿಲ್ಲೆ ತಗ' ಎನ್ನುವಳು. ಯಾರಾದರೂ 'ಗಂಗಕ್ಕಾ ನೀನೇ ಸೈ, ನೀನೇ ಪುರುಸೊತ್ತು ಮಾಡಿ ಬಪ್ಪೂದೇಯ' ಎಂದರೆ ಸಾಕು ಅವಳು ಏರಿ ಹೋಗುತ್ತಾಳೆ. ಆ ದಿನ ಇನ್ನೂ ಮುತುವರ್ಜಿಯಿಂದ ಅಡುಗೆ ಆಸೆ ಮಾಡಿ 'ಸೈ' ಎನಿಸಿಕೊಳ್ಳುತ್ತಾಳೆ.

ಪದ್ಮಾವತಿಯ ಅಣ್ಣ ಮಾದೇಭಾವ 'ಯೆಲ್ಲಾ ಮಲಗಿ ಬೆಳಿಗ್ಗೆ ನಾಕ್ ಗಂಟೆಗೆಲ್ಲಾ ಯದ್ದ ಬಿಡವ್ವು. ಮಲಗಿ ಮಲಗಿ ಎನ್ನುತ್ತಾ ಎಲ್ಲರನ್ನೂ ಮಲಗಲು ಹೊರಡಿಸಿದ. ಗಂಗೆ ಸುಬ್ಬಿ ಮೀನಾಕ್ಷಿ ಎಲ್ಲರೂ ಹಿತ್ತಲಕಡೆಯ ಬಾಗಿಲ ಹತ್ತಿರವೇ ಕಂಬಳಿ ಹಾಸಿಕೊಂಡು ಮಲಗಿದರು. ಇನ್ನೇನು ಕಣ್ಣಿಗೆ ನಿದ್ದೆ ಹತ್ತಬೇಕು, ಪದ್ಮಾವತಿ ಅವಳ ಅತ್ತಿಗೆ ಸಾವಿತ್ರಿಯ ಮಾತು ಕೇಳುತ್ತಿತ್ತು. 'ಅತ್ಗೆ ನಿಂದೆಲ್ಲಾ ತಯಾರಿ ಆತನೆ. ಮತ್ಯಂತಾರು ಇದ್ದ ನೋಡು. ಇದ್ರೆ ಈಗೆ ಮುಗ್ಸಿ ಬಿಡನ' ಎಂದಳು ಸಾವಿತ್ರಿ. 'ಆತೆ ಯಲ್ಲಾ ತಯಾರೀನೂ ಆಜು ಸುಮಾರೀಗೆ, ಕಡೀಗೆ ವಂದ ಬಿಟ್ಟ ಹೋಗ್ತೆ. ಹಾಂಗ್ ಅಪ್ಪದೇಯ. ಆದ್ರೂವ ಯಮ್ಮನೆ ಗಿರಿಜಾ ಸರೋಜ ಇದ್ವಲೆ ಅವ್ವ್ ಚಲೋ ಇದ್ದ, ಬಾಗ್ಲಲ್ಲಿ ಹೂಗಿನ ರಂಗೋಲಿಂದ ಹಿಡ್ದು ಮಂಟಪದ ವರೆಗೂ ಅವ್ರದ್ದೇಯ ತಯಾರಿ.ಯಾವ್ದು ಬಿಟ್ಟದ್ವಿಲ್ಲೆ'ಎಂದಳು ಪದ್ಮಾವತಿ. 'ಅತ್ಗೇ ಕಡೀಗೆ ನಾಗಪ್ಪಣ್ಣನ ಹೆಂಡ್ತೀಗೆ ಶೀರೆ ಕೊಟ್ಟಾಜಿಲ್ಲೆ. ಅವ್ವೆಲ್ಲಾ ಹತ್ರದ ಬಳಗದವ್ವು ಹೌದಾ,' ' ಶೀರೆ ಕಡ್ಮೆ ಬಿತ್ತ, ತಂಗಿ ಹೇಳ್ತಾ ಇತ್ತಲೇ ಕಡೀಗ್ ತರ್ತ ಹೋಗ್ತು ಹೇಳಿ, ಅದ್ಕೆಯಾ ತಂಗಿ ಹತ್ರ ಹೇಳಿದಿದೆ'

'ಹೌದೇ ಅದ್ಕೂ ಕೊಟ್ಟಾತು. ಯಂಗ ವಂದು ಉಪಾಯ ಮಾಡಿದ್ಯ, ಗನಾ ಶೀರೆ ಇತ್ತಿಲ್ಲೆ, ಅದು ಉಡವಂತಾದಾರು ಕೊಡವಲೇ. ಅದ್ಕೆ ಆನೆಯ ಒಂದು ಉಪಾಯಾ ಹೇಳ್ದೆ, ಅದೇ ಅಡ್ಗೆ ಗಂಗಕ್ಕಂಗೆ ತಪ್ಪರಗ್ಯಾಗಿ